# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1457 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಕೆ.ಸಿ. ವ್ಯಾಲಿ ಮತ್ತು ಹೆಬ್ಬಾಳದಲ್ಲಿನ ಕೊಳಚೆ ನೀರು ಸಂಸ್ಕರಣ ಘಟಕದ ನಿರ್ಮಾಣದ ನಂತರ ಎಷ್ಟು ಕೆರೆಗಳಿಗೆ ನೀರನ್ನು ಸರಬರಾಜು ಮಾಡಲಾಗಿದೆ; (ವಿವರ ನೀಡುವುದು) | **ಕೆ.ಸಿ.ವ್ಯಾಲಿ ಯೋಜನೆ:-**<br>1) ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಕೆ.ಸಿ.ವ್ಯಾಲಿ ಮತ್ತು ಹೆಬ್ಬಾಳದಲ್ಲಿನ ಕೊಳಚೆ ನೀರು ಸಂಸ್ಕರಣ ಘಟಕದ ನಿರ್ಮಾಣದ ನಂತರ ಬೆಂಗಳೂರು ನಗರದ ಕೋರಮಂಗಲ ಮತ್ತು ಚಲ್ಲಘಟ್ಟ ಹಾಗೂ ಬೆಳ್ಳಂದೂರು ಸಂಸ್ಕರಣ ಘಟಕಗಳಿಂದ ಒಟ್ಟು 400 ಎಂ.ಎಲ್.ಡಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೋಲಾರ ಜಿಲ್ಲೆಯ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಒಟ್ಟು 126 ಕೆರೆಗಳಿಗೆ ತುಂಬಿಸುವ ಯೋಜನೆ ರೂಪಿಸಿದ್ದು, ಯೋಜನೆಯಡಿ ಪ್ರಸ್ತುತ ಕೆ.ಸಿ.ವ್ಯಾಲಿ ಸಂಸ್ಕರಣಾ ಘಟಕಗಳಿಂದ ಪೈಕಿ ಲಭ್ಯವಾಗುತ್ತಿರುವ ಸರಾಸರಿ ದಿನಂಪ್ರತಿ 346.00 ಎಂ.ಎಲ್.ಡಿ. ನೀರನ್ನು ಕೋಲಾರ ಜಿಲ್ಲೆಯ 121 ಕೆರೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 5 ಕೆರೆಗಳನ್ನು ತುಂಬಿಸಲಾಗುತ್ತಿದೆ, ಯೋಜಿತ 126 ಕೆರೆಗಳ ಜೊತೆಗೆ ಯೋಜನೆಯ ಅನುಷ್ಠಾನದ ನಂತರ ಹೆಚ್ಚುವರಿಯಾಗಿ 14 ಕೆರೆಗಳು ಸೇರ್ಪಡೆ ಮಾಡಿ ಒಟ್ಟು 140 ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಂಡಿದ್ದು, ಈವರೆಗೆ 138 ಕೆರೆಗಳಿಗೆ (7.68 ಟಿ.ಎಂ.ಸಿ) ನೀರನ್ನು ಪೂರ್ಣ ಪ್ರಮಾಣದಲ್ಲಿ ತುಂಬಿಸಲಾಗಿರುತ್ತದೆ.<br><br>2) ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ಕೆ.ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಒಟ್ಟು 120 ಎಂ.ಎಲ್.ಡಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕು ಮತ್ತು ಕನಕಪುರ ತಾಲ್ಲೂಕಿನ ಒಟ್ಟು 69 ಕೆರೆಗಳನ್ನು ತುಂಬಿಸಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಹಾಲಿ ಟ್ರಯಲ್ ರನ್ ನಡೆಸಲಾಗುತ್ತಿದ್ದು, 15 ಕೆರೆಗಳನ್ನು ತುಂಬಿಸಲಾಗುತ್ತಿದೆ.<br><br>**ಹೆಚ್.ಎನ್. ವ್ಯಾಲಿ ಯೋಜನೆ:-**<br>ಬೆಂಗಳೂರು ನಗರದ ಹೆಬ್ಬಾಳ ನಾಗವಾರ ವ್ಯಾಲಿಯಲ್ಲಿನ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಎರಡನೇ ಹಂತದಲ್ಲಿ ಸಂಸ್ಕರಿಸಿದ ನೀರನ್ನು ಬೆಂಗಳೂರು ನಗರ ಮತ್ತು ಗ್ರಾಮಾಂತರ ಹಾಗೂ |

| | | |
|---|---|---|
| | | ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿನ 65 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಹೆಬ್ಬಾಳ-ನಾಗವಾರ STP ಯಿಂದ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 210 ಎಂ.ಎಲ್.ಡಿ ಪೈಕಿ ಸರಾಸರಿ 130 ಎಂ.ಎಲ್.ಡಿ ನೀರನ್ನು ಒದಗಿಸುತ್ತಿದ್ದು, ಹೆಚ್.ಎನ್.ವ್ಯಾಲಿ ಯೋಜನೆಯಿಂದ ಇದುವರೆಗೂ 2.55 ಟಿ.ಎಂ.ಸಿ ನೀರನ್ನು ಕೆರೆಗಳಿಗೆ ಪಂಪ್ ಮಾಡಲಾಗಿರುತ್ತದೆ. ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ 2021 ತಿಂಗಳಲ್ಲಿ ಸುರಿದ ಹೆಚ್ಚಿನ ಮಳೆಯಿಂದ ಹಾಗೂ ಈ ಯೋಜನೆಯಿಂದ ಪಂಪ್ ಮಾಡಿರುವ ನೀರು ಸೇರಿದಂತೆ ಹೆಚ್.ಎನ್. ವ್ಯಾಲಿ ಯೋಜನೆಯಡಿ 65 ಕೆರೆಗಳ ಪೈಕಿ 64 ಕೆರೆಗಳಿಗೆ ನೀರನ್ನು ಹರಿಸಲಾಗಿದೆ. |
| ಆ) | ಕೋರಮಂಗಲದಲ್ಲಿರುವ ಮೇಸ್ತ್ರಿಪಾಳ್ಯ ಕೆರೆಯನ್ನು ಪುನಃಶ್ಚೇತನಗೊಳಿಸಲು ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು; ಈ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ಹಾಗೂ ಅದರ ವಿವರಗಳೇನು? | ಕೋರಮಂಗಲದಲ್ಲಿರುವ ಮೇಸ್ತ್ರಿಪಾಳ್ಯ ಕೆರೆಯನ್ನು ಪುನಶ್ಚೇತನಗೊಳಿಸಲು ಪಾಲಿಕೆಯ 2019-20ನೇ ಸಾಲಿನ ಮಾನ್ಯ ಪೂಜ್ಯ ಮಹಾಪೌರರ ವಿವೇಚನೆಯ ವಿಶೇಷ ಅನುದಾನದಡಿಯಲ್ಲಿ ರೂ.480.00 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ.<br><br>ಈ ಕಾಮಗಾರಿಯನ್ನು ಶ್ರೀ ಜವಳಿ ಚಂದ್ರಣ್ಣ ಪ್ರಕಾಶ್ (ಜೆ.ಸಿ.ಪ್ರಕಾಶ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ) ರವರಿಗೆ ವಹಿಸಲಾಗಿದೆ. ಸದರಿ ಪುನಶ್ಚೇತನ ಕಾಮಗಾರಿಯಲ್ಲಿ ಮುಖ್ಯ ಏರಿಯನ್ನು ಬಲಪಡಿಸುವುದು, ಆರ್.ಸಿ.ಸಿ ಡ್ರೈನ್ ನಿರ್ಮಾಣ, ಕೆರೆಯ ಅಂಚಿನಲ್ಲಿ ತಡೆಗೋಡೆ ನಿರ್ಮಾಣ, ಕೆರೆಯಲ್ಲಿ ನೀರಿನ ಶೇಖರಣೆಯ ಸಾಮರ್ಥ್ಯವನ್ನು ಹೆಚ್ಚು ಮಾಡುವುದು ಮತ್ತು ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳು ಒಳಗೊಂಡಿದೆ. |

**ಸಂಖ್ಯೆ: ನಅಇ 31 ಎಂಎನ್‌ಐ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ